at the same time while we discharge as Ministers in the Cabinet including Chief Minister and Home Minister, we will have to be extra careful.

ಅದಕ್ಕೇ ಹೇಳಿದೆ, ಕೆಲವು ಸಲ ನಿಮ್ಮ ಮೇಲೆ ನಮ್ಮ ಮೇಲೆ ಅಪಾದನೆ ಬರುತ್ತದೆ, ಏನೂ ಮಾಡದೆಯೇ ನೋಡಿ ಈಗ ಹಸ್ತಕ್ಷೇಪ ಮಾಡುತ್ತಿದ್ದೇವೆ ಎಂದು ಬಂತು ಅಂತಹ ಪ್ರಸಂಗ ನಿಮ್ಮದೂ ಇರಬಹುದು, ನಮ್ಮದೂ ಇರಬಹುದು, ಅಂತಹ ಪ್ರಸಂಗ ಎಲ್ಲರಿಗೂ ಬರುತ್ತದೆ. ಆದ್ದರಿಂದ ಅಂತಹ ಒಂದು ನಡವಳಿಕೆಯನ್ನು ತಪ್ಪಿಸೋಣ ಎಂದು ಹೇಳಿದೆ, ನಿಮ್ಮ ಮೇಲೂ ಅಪಾದನೆ ಬಂದಿದೆ ಎಂದು ಹೇಳಿದೆ ಅಂದರೆ ನೀವು ಅಂತಹ ಕೆಲಸ ಮಾಡಿದ್ದೀರಿ ಎಂದು ಖಂಡಿತವಾಗಿಯೂ ಹೇಳಲಿಲ್ಲ. ಅಂತಹ ಅಪಾದನೆ ನಿಮ್ಮ ಮೇಲೆ ಬಂದಿದೆ, ನಮ್ಮ ಮೇಲೆ ಬರಬಹುದು, ನಿಮ್ಮ ಮೇಲೆ ಬಂದ ಅಪಾದನೆ ಸತ್ಯ ಎಂದು ನಾನು ಹೇಳುತ್ತಿಲ್ಲ. I know you are pained because some incidents happened that doesn't mean alleging against you.

ನಾನು ಅದನ್ನು ಹೇಳುತ್ತಿಲ್ಲ. ನಾನು ಹೇಳುತ್ತಿರುವುದು ಅಂತಹ ಅಪಾದನೆಗಳು ನಾವಿಂಥ ಸ್ಥಾನದಲ್ಲಿರುವಾಗ ಬರುತ್ತದೆ. ಆದ್ದರಿಂದ ಬಹಳ ಜಾಗರೂಕತೆಯಿಂದ ಕೆಲಸ ಮಾಡಬೇಕಾಗುತ್ತದೆ. ನಿಮಗೂ ಅನುಭವ ಇದೆ. ಕೆಲವು ಸಲ ಇಂತಹ ಅಪಾದನೆಗಳು ಬಂದಾಗ ಎಷ್ಟು ತೊಂದರೆ ಅನುಭವಿಸುತ್ತೇವೆ ಎಂದು ತಮ್ಮ ಅನುಭವಕ್ಕೆ ಬಂದಿದೆ ಎಂದು ಅಷ್ಟೇ ನಾನು ಹೇಳಿದುದ್ದು. ತಮಗೆ ನೋವು ಮಾಡಬೇಕು ಎಂದು ಹೇಳಲಿಲ್ಲ.

(ಗೊಂದಲ)

ಉಪಾಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ನಾನು ನಿಮಗೆ ವೈಯಕ್ತಿಕವಾಗಿ ಅಲೆಜ್ ಮಾಡಿಲ್ಲ, ಆ ರೀತಿ ಆಗಿದ್ದರೆ ಸಾರಿ ಎಂದೂ ಕೇಳಿದ್ದಾರೆ. ದಯಮಾಡಿ ಇದನ್ನು ಮುಕ್ತಾಯ ಮಾಡಿ. ಗಮನ ಸಳೆಯುವ ಸೂಚನೆ ಶ್ರೀಮತಿ ಮೋಟಮ್ಮನವರದ್ದು. ಹಾಗೆಯೇ ಈಗಾಗಲೇ ನಾನು ಹೇಳಿದ್ದೇನೆ ಮಾನ್ಯ ಬೈರೇಗೌಡರು ಉಪಯೋಗಿಸಿದಂತಹ ಪದವನ್ನು ಕಡತದಿಂದ ಎಕ್ಸೆಂಜ್ ಮಾಡಿದ್ದೇನೆ. ಈಗ ಗಮನ ಸೆಳೆಯುವ ಸೂಚನೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಬದಲು ಬೇರೆ ವಿಷಯ ತೆಗೆದುಕೊಂಡಿರುವುದು.

+ಶ್ರೀ ಹೆಚ್. ವಿಶ್ವನಾಥಯ್ಯ : ಸ್ವಾಮಿ ನಾನು ಕ್ರಿಯಾಲೋಪ ಎತ್ತುತ್ತಿದ್ದೇನೆ. ಅಧ್ಯಕ್ಷರೇ, ಸಂವಿಧಾನದತ್ತವಾದ ಅಧಿಕಾರ ಉಪಯೋಗಿಸಿಕೊಂಡು ರಾಜ್ಯಪಾಲರು ಭಾಷಣ ಮಾಡಿದ್ದಾರೆ. ಆ ಭಾಷಣದ ಮೇಲೆ ಚರ್ಚೆಯನ್ನು ನಾವು ಆರಂಭ ಮಾಡಬೇಕಾಗಿದೆ. ತಮ್ಮ ಮತ್ತು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ ಇದು ಬಹಳ ಗಂಭೀರವಾದ ವಿಚಾರ, ಸಂಪ್ರದಾಯಬದ್ಧವಾಗಿ . ನಡೆದುಕೊಳ್ಳಬೇಕಾಗುತ್ತದೆ. ಕಾನೂನು ಬದ್ಧವಾಗಿ ನಡೆದುಕೊಳ್ಳಬೇಕಾಗುತ್ತದೆ. ಈ ಒಂದು ವಂದನಾಪ್ರಸ್ತಾವಕ್ಕೆ ಭಾಷಣ ಮಾಡುವಂತಹ ಸಂದರ್ಭದಲ್ಲಿ ಮಧ್ಯೆ ಯಾವುದೇ ವಿಧವಾದ ಕಾರ್ಯಕಲಾಪವನ್ನು ತೆಗೆದುಕೊಳ್ಳದಿರುವುದು ಒಂದು ಸಂಪ್ರದಾಯವಾಗಿ ಬೆಳೆದುಬಂದಿದೆ. ಅಧ್ಯಕ್ಷರೇ, ಬೆಳಿಗ್ಗೆ ನಾವು ನೋಡಿದ್ದೇವೆ, ತಾವು ಬಿಸಿನೆಸ್ ಅಡ್ವೈಸರಿ ಕಮಿಟಿಯ ಶಿಫಾರಸ್ ಮೇಲೆ ಮಾಡಿರಬಹುದು ಆದರೂ ನಾನು ಹೇಳುತ್ತೇನೆ. ಬಿಸಿನೆಸ್ ಅಡ್ವೈಸರಿ ಕಮಿಟಿಯವರು

ಏನು ಶಿಫಾರಸ್ ಮಾಡಿದ್ದಾರೆ ಅದು ಸಂಪ್ರದಾಯವಲ್ಲದಂತಹ ರೀತಿಯಲ್ಲಿದೆ. ಇವತ್ತಿನದಿವಸ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಈ ಸದನದ ಪ್ರತಿಷ್ಠೆ ಸತ್ಸಂಪ್ರದಾಯಗಳನ್ನು ತಾವು ಎತ್ತಿಹಿಡಿಯುವುದಕ್ಕೆ ತಾವು ಮನಸ್ಸು ಮಾಡಬೇಕು. ಯಾವ ಒಂದು ಗಂಭೀರವಾದ ಮಹತ್ವವನ್ನು ಚರ್ಚೆ ಕಾಲದಲ್ಲಿ ರಾಜ್ಯಪಾಲರ ಭಾಷಣಕ್ಕೆ ಕೊಡಬೇಕಾಗಿತ್ತೋ ಆ ಮಹತ್ವವನ್ನು ಕೊಡಲಾರದ ಪರಿಸ್ಥಿತಿಯಲ್ಲಿ ಈ ಸದನದ ಕಾರ್ಯಕಲಾಪಗಳನ್ನು ಗೊತ್ತುಮಾಡಿದ್ದೀರಿ. ಆದ್ದರಿಂದ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಯಾವ ವಂದನಾಪ್ರಸ್ತಾವಕ್ಕೆ ಇವತ್ತಿನ ಕಾಲವನ್ನು ಗೊತ್ತು ಮಾಡಿದ್ದೀರಿ. ಆ ರೀತಿ ಕಾರ್ಯಕಲಾಪ ಆಗಲಿಲ್ಲ. 2 ಗಂಟೆಯಿಂದ 5 ಗಂಟೆವರೆಗೆ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಅರ್ಪಿಸುವಂತಹ ಕಸ್ಟಂ ಏನಿದೆ ಅದರ ಮೇಲೆ ಚರ್ಚೆ ಆಗಬೇಕಾಗಿತ್ತು, ಆ ಚರ್ಚೆ ಆಗಲಿಲ್ಲ. ತದನಂತರವಾದರೂ ತಾವು ತೆಗೆದುಕೊಳ್ಳಲಿಲ್ಲ. ಯಾವ ನಿಯಮಗಳನ್ನು ನಾವು ಮಾಡಿಕೊಂಡಿದ್ದೇವೆ ಅವಕ್ಕೆ ವಿರುದ್ಧವಾಗಿ ರಾಜ್ಯಪಾಲರ ಭಾಷಣಕ್ಕೆ ಯಾವ ಗೌರವ ಕೊಡಬೇಕಾಗಿತ್ತು. ಅದನ್ನು ಕೊಡದಂತಹ ರೀತಿಯಲ್ಲಿ ಈ ಸಭೆಯ ಕಲಾಪ ನಡೆಯುತ್ತಿರುವುದರಿಂದ ಇದರ ಬಗ್ಗೆ ತಾವು ರೂಲಿಂಗನ್ನು ಕೂಡಬೇಕು.

ಉಪಾಧ್ಯಕ್ಷರು : ಆ ವಿಷಯ ಇವತ್ತು ಅಥವಾ ನಾಳೆ ತೆಗೆದುಕೊಳ್ಳುತ್ತೇವೆ. ಈಗ ಗಮನ ಸೆಳೆಯುವ ಸೂಚನೆ.

ಶ್ರೀ ಹೆಚ್. ವಿಶ್ವನಾಥ್ : ಸ್ವಾಮಿ ನಾನು ಇಷ್ಟೇ ಕೇಳುತ್ತಿರುವುದು ಇರುವಂತಹ ನಿಯಮಗಳನ್ನು ಗಾಳಿಗೆ ತೂರಿ ರಾಜ್ಯಪಾಲರ ಭಾಷಣಕ್ಕೆ ಗೌರವ ಪಡಿಸಿದಂತಹ ಕಾಲದಲ್ಲಿ ಬೇರೆ ಕಾರ್ಯಕಲಾಪ ತೆಗೆದುಕೊಳ್ಳಬಹುದಾ? ನನ್ನ ಪ್ರಕಾರ ಈ ಕಾರ್ಯಕಲಾಪ ಏನಿದೆ ಸ್ವಾಮಿ? ರೂಲ್ಸ್ ಏಕೆ ಮಾಡಿದಿರಿ ಹೇಳಿಬಿಡಿ, ಈ ಪುಸ್ತಕವನ್ನು ಹರಿದು ಬಿಸಾಕಿ ಹೋಗಿಬಿಡಿ ಎಲ್ಲಾರೂ. ನೀವು ಇಲ್ಲಿರುವುದು ನಮ್ಮ ಹಕ್ಕನ್ನು ಕಾಪಾಡುವುದಕ್ಕೆ, ಈ ನಿಯಮಗಳ ಪ್ರಕಾರ ಸದನವನ್ನು ನಡೆಸಿಕೊಂಡು ಹೋಗುವುದಕ್ಕೆ ಸಹಾಯ ಮಾಡುವುದಕ್ಕೆ. ಯಾವ ನಿಯಮಗಳನ್ನು ನಾವು ಮಾಡಿಕೊಂಡಿದ್ದೇವೆ, ಯಾವ ಒಂದು ಪ್ರಸ್ತಾವದ ಚರ್ಚೆ ಕಾಲದಲ್ಲಿ ಯಾವುದೇ ವಿಚಾರಗಳನ್ನು ತೆಗೆದುಕೊಳ್ಳ ಬಾರದು ಎಂದು ನಿಯಮ ಮಾಡಿಕೊಂಡಿದ್ದರೂ ಸಹ ಆ ನಿಯಮಗಳಿಗೆ ವಿರುದ್ಧವಾಗಿ ಇವತ್ತು 334,ಕಾಲ್ ಅಟೆನ್ಷನ್, ಬೇರೆ ಬೇರೆ ಬಿಸಿನೆಸ್ಸೆನ್ನನು ತಾವು ತೆಗೆದುಕೊಳ್ಳುವುದಾದರೆ ಅದು ನಿಯಮಬದ್ಧವಾಗಿಲ್ಲ.

ಒಂದು ನಿಯಮ ಇದೆ. ಅದನ್ನು ಗಾಳಿಗೆ ತೂರಿ ಚರ್ಚೆಗೆ ಆಸ್ಪದ ಕೊಡುತ್ತೇವೆಂದು ಹೇಳಿದರೆ ನನ್ನದೇನೂ ಅಭ್ಯಂತರವಿಲ್ಲ. ನಿಯಮಗಳನ್ನು ನೋಡಿಕೊಂಡು ಇವತ್ತಿನ ದಿವಸ ಈ ಮಧ್ಯ ಕಾಲದಲ್ಲಿ ಪ್ರಸ್ತಾವದ ಚರ್ಚೆ ಕಾಲದಲ್ಲಿ ಬೇರೆ ಬಿಜಿನೆಸ್ ಅನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯವಿಲ್ಲ. ಆ ನಿಯಮವನ್ನು ನಾವು ಮಾಡಿಕೊಂಡಿದ್ದೇವೆ. ಅದರ ಪ್ರಕಾರ ಗೊತ್ತುಪಡಿಸಿದಂತಹ ಕಾಲದಲ್ಲಿ ಗೊತ್ತುಪಡಿಸಿದ ದಿನಾಂಕದಂದು ರಾಜ್ಯಪಾಲರ ಭಾಷಣಕ್ಕೆ ವಂದನೆ ಸೂಚಿಸುವ ಪ್ರಸ್ತಾವವನ್ನು ಚರ್ಚೆಗೆ ತೆಗೆದುಕೊಳ್ಳಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ರೂಲ್ 22 ಓದಿ. sub-rule (2)of Rule 22 reads:

"The discussion on the Address may be postponed in favour of a Government Bill or other Government business on a motion being made that the discussion on the Address be adjourned to a subsequent day to be appointed by the Speaker.

(ಮಾನ್ಯ ಅಧ್ಯಕ್ಷರು (ಶ್ರೀ ವಿ.ಎಸ್.ಕೌಜಲಗಿಯವರು) ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಹೆಚ್. ಏಕಾಂತಯ್ಯ : ತಾವು ಹಾಗೆ ಹೇಳುವುದಾದರೆ ಇಲ್ಲಿಯವರೆಗೆ ತಾವು ಬೈರೇಗೌಡರ ಬಗ್ಗೆ ಹೇಳಿದಂತಹ ಮಾತುಗಳಿಗೇನು ಅರ್ಥವಿದೆ? ಒಂದು ಪ್ರಸ್ತಾವನೆ ಮೂಲಕ ಈ ಕಾರ್ಯಕಲಾಪಗಳನ್ನು ಮುಂದುವರಿಸಲಿಕ್ಕೆ ನಿರ್ಣಯವಾದಾಗ ಮಾತ್ರ ತಾವು ಹೇಳಿದಂತಹ ಮಾತು ಬರುತ್ತದೆ. ನೀವೀಗ ಹೇಳಿದರೆ ಇಲ್ಲಿಯವರೆಗೆ ತಾವು ಬೈರೇಗೌಡರ ಬಗ್ಗೆ ಹೇಳಿದಂತಹ ಮಾತುಗಳಿಗೆ ಏನು ಅರ್ಥ ಇದೆ?

ಶ್ರೀ ಕೆ.ಹೆಚ್. ರಂಗನಾಥ್ : ಮದುವೆ ಮಾಡುತ್ತೇವೆಂದು ಇನ್ವಿಟೇಷನ್ ಕೊಟ್ಟು...

ಶ್ರೀ ಹೆಚ್. ಏಕಾಂತಯ್ಯ : ನಿಯಮಗಳನ್ನು ಎತ್ತಿ ಹಿಡಿಯಲಿಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಕೆ.ಹೆಚ್.ರಂಗನಾಥ್ : ಸಲಹಾ ಸಮಿತಿಯಲ್ಲಿ ಚರ್ಚೆಯಾಗಿದೆ. ಸ್ಪಾಟ್ಟುಟರಿ ರೂಲ್ ಇದೆ ರೂಲ್ 22 ಪರ್ಮಿಟ್ ಮಾಡುತ್ತದೆ. ಸಲಹಾ ಸಮಿತಿಯಲ್ಲಿ ಇಷ್ಟು ಬಿಜಿನೆಸ್ ಮಾಡಬೇಕು ಮತ್ತು ಮುಖ್ಯವಾದ ಬಿಲ್ಸ್ ಇದ್ದರೆ ಅವುಗಳನ್ನು ತೆಗೆದುಕೊಳ್ಳಲು ಅಲ್ಲಿ ಒಪ್ಪಿಗೆಯಾಗಿದೆ.

ಶ್ರೀ ಹೆಚ್. ಏಕಾಂತಯ್ಯ : ಅವರಿಗೇನೂ ಅಧಿಕಾರ ಇಲ್ಲ. ನಿಯಮಗಳಿಗೆ ವಿರುದ್ಧವಾಗಿ ನಿಮ್ಮ ಕಾರ್ಯಕಲಾಪ ಸಮಿತಿಯಲ್ಲಿ ಕೂಡ ನಿರ್ಣಯ ತೆಗೆದುಕೊಳ್ಳಲಿಕ್ಕೆ ಅಧಿಕಾರ ಇಲ್ಲ. ತಾವು ತೆಗೆದುಕೊಂಡ ನಿರ್ಣಯದ ಪ್ರಕಾರ 2 ರಿಂದ 5 ರವರೆಗೆ ತಾವು....

ಶ್ರೀ ಕೆ.ಹೆಚ್. ರಂಗನಾಥ್ : ತಮ್ಮ ಕ್ರಿಯಾಲೋಪದ ಮೇಲೆ ಸುಧೀರ್ಘವಾದ ರೂಲಿಂಗ್ ಕೊಡಲಿ. ಆ ಪ್ರಶ್ನೆ ಬೇರೆ. ಆದರೆ ಇಲ್ಲವೇ ಇಲ್ಲವೆಂದು ಹೇಳುವುದು ತಪ್ಪಾಗುತ್ತದೆ. There is a Chapter provided in the Rules of Procedure with a caption 'Other business that may be taken up"

ಎಕ್ಸೆಷನ್ ಕೂಡ ಇದೆ. Rule 22(1) reads:

(1) Notwithstanding that a day has been allotted for discussion on the Governor's Address-

Then, subrule - (2) reads:

(2) The discussion on the Address may be postponed in favour a Government Bill....

Here the Business Advisory Committee in view of the necessity it has taken this decision and set apart a particular period...

ಶ್ರೀ ಹೆಚ್. ಏಕಾಂತಯ್ಯ : ಅವರು ಒಂದು ಭಾಗವನ್ನು ಮಾತ್ರ ಓದಿದ್ದಾರೆ. ಮತ್ತೊಂದು ಭಾಗವನ್ನು ಹೇಳುತ್ತೇವೆ. It says - 'The discussion on the Address may be postponed in favour of a Government Bill or other Government business on a motion being made that the discussion on the Address be adjourned to a subsequent day to be appointed by the Speaker.

Here unless a motion is moved by tthe concerned authorities, this House cannot discuss other things other than the Address made by the Governor.

ಶ್ರೀ ಕೆ.ಹೆಚ್. ರಂಗನಾಥ್ : ಅದನ್ನು ನಾನು ಓದಲೇ ಇಲ್ಲವಲ್ಲಾ.

ಶ್ರೀ ಹೆಚ್. ಏಕಾಂತಯ್ಯ : ಒಂದು ನಿಮಿಷ ಅವಕಾಶ ಕೊಡಿ ಈ ರೀತಿಯಾಗಿ ಮಾಡುವುದರಿಂದ ಖಂಡಿತವಾಗಿಯೂ ನಮಗಾಗಲೀ, ಈ ಸದನಕ್ಕಾಗಲೀ ಗೌರವ ಬರುವುದಿಲ್ಲ. ಪ್ರಸಿಡೆನ್ಷಿಯಲ್ ಅಡ್ರೆಸ್ ಆದಾಗ, ಗವರ್ನರ್ಸ್ ಅಡ್ರೆಸ್ ಆದಾಗ ಯಾವ ರೀತಿಯಾಗಿ ಚರ್ಚೆ ಮಾಡಬೇಕೆಂದು ಪಾರ್ಲಿಮೆಂಟಿನಲ್ಲಿ ಮಾಡಿದ್ದೇವೆ ಈ ಸದನದಲ್ಲಿ ನಾವೂ ಮಾಡಿದ್ದೇವೆ. ಚರ್ಚೆಗೆ ಮಹತ್ವ ಇದೆ ಆ ಮಹತ್ವದ ಚರ್ಚೆಯ ಮಧ್ಯ ಕಾಲದಲ್ಲಿ ನೀವು ಬೇರೆ ಬೇರೆ ವಿಚಾರವನ್ನು ಪ್ರಸ್ತಾಪಮಾಡಲಿಕ್ಕೆ ಸಾಧ್ಯ ಇಲ್ಲ ಅದನ್ನು ಮಾಡಬಾರದೆಂದು ನಾವು ನಿಯಮ ಮಾಡಿಕೊಂಡಿದ್ದೇವೆ. ಒಂದು ಪಕ್ಷ ಸರಕಾರಿ ವಿಧೇಯಕಗಳು ಇದ್ದಾರೆ ಅದಕ್ಕೆ ಸಂಬಂಧಪಟ್ಟಂತೆ ನೇರವಾಗಿ ನಿರ್ದಿಷ್ಟವಾಗ ಪ್ರಸ್ತಾವನೆಯನ್ನು ಸಭೆಯ ಮುಂದಿಡುವ ಮುಖಾಂತರ ಸಭೆಯ ಒಪ್ಪಿಗೆ ಪಡೆಯಲು ತಮಗೆ ಅಧಿಕಾರ ಇದೆ ಇದನ್ನು ಮುಂದಕ್ಕೆ ಹಾಕಲಿಕ್ಕೆ ಇಲ್ಲವೇ ಬೇರೆ ಬಿಜಿನೆಸ್ ಮಾಡುವುದಾದರೆ ಖಂಡಿತವಾಗಿ ನಿಮಗೆ ಯಾರಿಗೂ ಅದು ಮಾನವನ್ನು ತರುವುದಿಲ್ಲ. ಹಿಂದಿನ ಪ್ರೊಸೀಡಿಂಗ್ಸ್ ಅನ್ನು ನೋಡಿ, ನಿಯಮವನ್ನು ನೋಡಿ ಪಾರ್ಲಿಮೆಂಟಿನ ನಿಯಮಗಳನ್ನು ನೋಡಿ. ರೂಲ್ಸ್ ಬೇಡ ಅಂದರೆ ಅದನ್ನು ಸುಟ್ಟು ಹಾಕಿಬಿಡಿ ಯಾರು ಹೇಗೆ ಬೇಕಾದರೂ ಮಾಡೋಣ ಅಂದರೆ....

ಶ್ರೀ ಹಾರನಹಳ್ಳಿ ರಾಮಸ್ವಾಮಿ : ರಾಜ್ಯಪಾಲರ ವಂದನಾ ನಿರ್ಣಯದ ಮಂಡನೆಯಾಗುತ್ತದೆ ಮಂಡನೆಯಾದ ಸ್ವಲ್ಪ ಹೊತ್ತಿನ ಮೇಲೆ ಕಾರ್ಯಕ್ರಮವನ್ನು ಮುಂದುವರಿಸಿ ಸಲಹಾ ಸಮಿತಿಯಲ್ಲಿ ಮಾಡಿದ ತೀರ್ಮಾನದ ಪ್ರಕಾರ ಸರಕಾರಿ ಬಿಲ್ಲಗಳನ್ನು ತೆಗೆದುಕೊಳ್ಳುತ್ತೇವೆ. ಇದರಲ್ಲಿ ನಿಯಮಕ್ಕೆ ವಿರುದ್ಧ ಇಲ್ಲ. ನಿಯಮದ ಪ್ರಕಾರವೇ ಆಗಿದೆ. ನೀವು ತೃಣವನ್ನು ಪರ್ವತ ಮಾಡುತ್ತಿದ್ದೀರಿ. ನೀವು ಫಾರ್ಮಲ್ ಮೋಷನ್ ಬೇಕು ಎಂದರೆ ಮೋಷನ್ ಮೂವ್ ಮಾಡುತ್ತೇವೆ. ಅದು ಬೇಕೂ ಇಲ್ಲ.

ಶ್ರೀ ಹೆಚ್. ಏಕಾಂತಯ್ಯ : ಅದನ್ನು ಮಾಡಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಅದೆಲ್ಲಾ ಇಲ್ಲ ಸ್ವಾಮಿ, ಸಭೆಯ ಒಪ್ಪಿಗೆಯನ್ನು ಅಸ್ಯೂಮ್ ಮಾಡಿಕೊಳ್ಳಬಹುದು.

Sri. H. Ekanthaiah : Let it be on record.

ಶ್ರೀ ಕೆ.ಹೆಚ್. ರಂಗನಾಥ್ : ಇನ್ನೂ ಆ ಸ್ಟೇಜ್‌ಗೆ ತಾವು ಬಂದಿಲ್ಲ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಒಂದು ಅಭಿಪ್ರಾಯಕ್ಕೆ ಬಂದಿದೆ. ಬಿಲ್ಲುಗಳು ಇಷ್ಟಿದೆ. ಇದನ್ನು ನಾವು ಮಾಡಿ ಮುಗಿಸಬೇಕಾಗಿದೆ. ಗೌರ್ನರ್ಸ್ ಅಡ್ರೆಸ್ ಕಾಲದಲ್ಲಿ ಅದಲ್ಲದೆ ಬೇರೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಆ ಟೈಮ್ನಲ್ಲಿ ಮಾಡೋಣ ಒಂದು ಅಭಿಪ್ರಾಯಕ್ಕೆ ಬಂದು ಸಭೆಯ ಒಪ್ಪಿಗೆಯಾಗಿದೆ. ಗೌರ್ನರ್ ಅಡ್ರೆಸ್ ಮೇಲೆ ಇನ್ನು ಮೋಷನ್ ಕೂಡ ಮೂವ್ ಆಗಲಿಲ್ಲ. ಪಾರ್ಲಿಮೆಂಟ್ ಅಫೇರ್ಸ್ ಮಿನಿಸ್ಟರ್ ಏನು ಹೇಳಿದರು, ಐದು ಗಂಟೆಗೆ ಎಂದು ಹೇಳಿ ನಾವು ಬಿಲ್ಲಿಗೆ ನಿಗದಿ ಮಾಡಿದ್ದೇವೆ, ಯಾವಾಗ ತೆಗೆದುಕೊಳ್ಳುತ್ತೀರಿ ಎಂದು ಕೇಳಿದರು. ಅಷ್ಟೇ ವಿನ ಕ್ರಿಯಾ ಲೋಪಕ್ಕೆ ಅವಕಾಶ ಎಲ್ಲಿದೆ? ಮೋಷನ್ ಮೂವ್ ಆದಮೇಲೆ ಡಿಸ್ಕಷನ್ಸ್ ಆಗುವಾಗ there will be a motion to interrupt ಅದನ್ನು ಮುಗಿಸುವುದಕ್ಕೆ ಹೇಳುತ್ತಾರೆ. ಬಿಲ್ಲು ತೆಗೆದುಕೊಳ್ಳಬಹುದು ಎಂದು ತಾವು ಅಪ್ಪಣೆ ಕೊಟ್ಟರೆ ಬಿಲ್ಲನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ವೀರಪ್ಪಮೊಯಿಲಿ : ಲೋಕೋಪಯೋಗಿ ಸಚಿವರ ಮಾತಿಗೆ ಪೂರಕವಾಗಿ ಬಹುಶಃ ಏಕಾಂತಯ್ಯನವರು ಇವತ್ತು ಎತ್ತಿದಂಥ ಪ್ರಶ್ನೆ ಏನಿದೆ ಅದನ್ನು ಸ್ಪಷ್ಟೀಕರಿಸುವುದು ಒಳ್ಳೆಯದು. ಏಕೆಂದರೆ ಯಾರು ಇಷ್ಟರವರೆಗೆ ಎತ್ತಲಿಲ್ಲ. ಒಂದು ಹೊಸ ಪಾಯಿಂಟನ್ನು ತಾವು ಎತ್ತಿದ್ದೀರಿ, ಸ್ವಾಗತ. ಏಕೆಂದರೆ ಹಿಂದಿನಿಂದಲೂ

ನಡೆದುಕೊಂಡು ಬಂದದ್ದು ಏನೆಂದರೆ ಗೌರ್ನರ್ಸ್‌ಅಡ್ರೆಸ್ ಯಾರು ಅದನ್ನು ಮೂವ್ ಮಾಡಿದಮೇಲೆ ಏತನ್ಮಧ್ಯೆ ಯಾವವ ಬಿಸಿನೆಸ್‌ನ್ನು ಕೂಡ ಗೌರ್ನರ್ಸ್ ಅಡ್ರೆಸ್ ಹೊರತು ತೆಗೆದುಕೊಳ್ಳಬಾರದು ಎಂದು ಹೇಳಿ ಯಾವತ್ತೂ ಇಲ್ಲ. ಗೌರ್ನರ್ಸ್ ಅಡ್ರೆಸ್ ಚರ್ಚೆಗೆ ತೆಗೆದುಕೊಳ್ಳುತ್ತಾರೆ ಅದರ ಮಧ್ಯದಲ್ಲಿ ಬಿಲ್ಲುಗಳು ಆಗುತ್ತವೆ, ಅಫಿಷಿಯಲ್ ಬಿಸಿನೆಸ್ ಆಗುತ್ತದೆ. ನಾನ್ ಅಫಿಷಿಯಲ್ ಬಿಸಿನೆಸ್ ಆಗುತ್ತದೆ, ಅದು ಸೈಮಲ್ಟೇನಿಯಸ್ಲಿ ನಡೆದೇ ನಡೆಯುತ್ತದೆ. ಇದೇನೂ ಹೊಸಸಂಪ್ರದಾಯವಲ್ಲ. ಇದು ಸಂಪ್ರದಾಯ ಮತ್ತು ಅನ್ ರೆಕಾರ್ಡ್ ಕನ್ವೆನ್ಷನ್ ಪ್ರಕಾರ ಇದು ನಡೆದಿದೆ. ಇದನ್ನು ಯಾವುದಕ್ಕೆ ಪ್ರೊವೈಡ್ ಮಾಡಿದ್ದಾರೆ ಎಂದು ಹೇಳಿದರೆ ತಾವು ಸ್ಪಷ್ಟೀಕರಣ ಕೊಡಬಹುದು. ಯಾವುದಕ್ಕೆ ಪ್ರೊವೈಡ್ ಮಾಡಿದ್ದಾರೆ ಎಂದರೆ ಒಂದು ವೇಳೆ ರಾಜ್ಯಪಾಲರ ಅಡ್ರೆಸ್ ನಿನ್ನೆ ಆಯಿತು. ನಿನ್ನೆ ಆದಮೇಲೆ ಚರ್ಚೆಗೆ ಅದು ಮೂವ್ ಮಾಡದಿದ್ದರೆ ಅದನ್ನು ಮೂವ್ ಮಾಡದೇ ಇರುವುದಕ್ಕೆ ಮೋಷನ್ ಮೂವ್ ಮಾಡಬೇಕು under this rule 22(2). ಒಂದು ವೇಳೆ ಇವತ್ತು ಶ್ರೀ ಶಿವನಂಜಪ್ಪನವರು ಮೋಷನ್ ಆಫ್ ಥ್ಯಾಂಕ್ಸ್ಗೆ ಮೂವ್ ಮಾಡದೆ ಇವತ್ತು ಬಾಕಿ ಬಿಸಿನೆಸ್ ಒಂದು ವೇಳೆ ತೆಗೆದುಕೊಳ್ಳುವುದು ಇದ್ದರೆ ಆ ಸಂದರ್ಭದಲ್ಲಿ ವಿಕಾಂತಯ್ಯನವರು ಹೇಳಿದಂಥ ಮೋಷನನ್ನು ಮೂವ್ ಮಾಡಿ ಪೋಸ್ಟ್ಪೋನ್ ಮಾಡುವುದಕ್ಕೆ ಅವಕಾಶ ಸದನದಲ್ಲಿ ಕೇಳಬೇಕು. ಆದರೆ ಈಗ ಅದು ನಡೆಯುತ್ತಿಲ್ಲ. ಸನ್ಮಾನ್ಯ ಶಿವನಂಜಪ್ಪನವರು he is going to move a motion. The discussion will commence. After the commencement of the discussion, you can take up any business.

ಅದು ಏನಾಗಿದೆ ಎಂದರೆ ಕೆಲವು ಸಾರಿ ನಾವು ಲಾಯರ್ಸ್ ಏನು ಮಾಡುತ್ತೇವೆ. handsplitting argument ಗೆ ಪ್ರಯತ್ನ ಮಾಡುತ್ತೇವೆ. ಆಫ್ಕೋರ್ಸ್ ಜಡ್ಜಸ್ ನಮ್ಮನ್ನು ಸರಿದಾರಿಗೆ ತರುತ್ತಾರೆ. ಲಾಯರ್ಸ್ ಏನು ಮಾಡುತ್ತೇವೆ, ಏನಾದರೂ ಹುಡುಕೋಣ ಎಂದು ಹೇಳಿ ಪ್ರಯತ್ನ ಮಾಡುತ್ತೇವೆ. It is good. You have innovated one point. I don't think, you have no point; you have a point. But, rule 22(2), its scope is totally different than what you are telling today. The scope of the rule 22 (2) is meant for only to postpone the discussion at all for next session. But, we are going to have the Session upto 17th. We can postpone this discussion till March without taking up the resolution for discussion.

ನೆಕಸ್ಟ್ ಮಾರ್ಚಿನಲ್ಲಿ ಸೇರುವಂಥ ಸೆಷನ್ಗೆ ನಾವು ಪೋಸ್ಟ್ಪೋನ್ ಮಾಡುವುದಿದ್ದರೆ then, you will have to invoke the rule 22 (2).

ಅದರ್ವೈಸ್ ಇದನ್ನು ಇನ್ವೋಕ್ ಮಾಡತಕ್ಕಂಥ ಪ್ರಶ್ನೆಯೇ ಇಲ್ಲ. Now the motion will have to be moved and discussion will take place. You may adjourn for disicussion tomorrow. In-between, you can take up other issues. This is the practice; This is the rule and this is the order of the day.

ಶ್ರೀ ಹೆಚ್. ವಿಕಾಂತಯ್ಯ : ನಾನು ಸನ್ಮಾನ್ಯ ಅಧ್ಯಕ್ಷರು ತೀರ್ಮಾನವನ್ನು ಕೊಡಬೇಕು ಎಂಬುದು ನನ್ನ ವಿನಂತಿ. ಯಾವ ಒಂದು ಕಾಲವನ್ನು ನಾವು ಈ ಚರ್ಚೆಗೆ ನಿಗದಿ ಮಾಡಿದ್ದೇವೆ, ಆ ಚರ್ಚೆಯ ಅವಧಿಯಲ್ಲಿ ಅಥವಾ ಆ ಕಾಲದಲ್ಲಿ ಬೇರೆ ವಿಧವಾದಂಥ ಕಾರ್ಯಕಲಾಪವನ್ನು ನಡೆಸುವುದಕ್ಕೆ ಬರುವುದಿಲ್ಲ. ನಡೆಸುವುದಾದರೂ ಸಹ ಬಹಳ ಔಪಚಾರಿಕವಾದಂಥ Papers to be laid on the table of the House, matters under rule 334 calling attentions etc.,

ಆ ತರಹ, ಔಪಚಾರಿಕವಾದಂಥ ಕಾರ್ಯಕಲಾಪಗಳನ್ನು ಮಾತ್ರ ನಡೆಸಬಹುದೇ ಹೊರತಾಗಿ ಬೇರೆ ಯಾವುದೇ ವಿಧವಾದಂಥ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಸಾಧ್ಯವಿಲ್ಲ.

ನಾನು ಹೇಳಿದಂತಹ ಈ ಎಲ್ಲಾ ವಿಚಾರಗಳನ್ನು ಪರಿಶೀಲನೆ ಮಾಡಿ, ಪರಿಗಣನೆಗೆ ತೆಗೆದುಕೊಂಡು ತಮ್ಮದೇ ಆದಂತಹ ನಿರ್ಧಾರವನ್ನು ಸಭೆಯಲ್ಲಿ ಹೇಳಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಪ್ರತ್ಯೇಕವಾದ ಒಂದು ಪ್ರಸ್ತಾವನೆ ಇದಕ್ಕೆ ಬೇಕಾಗಿಲ್ಲ. ಇದು ಪಾರ್ಲಿಮೆಂಟಿನಲ್ಲಿ ಕೂಡ ಇದೇ ರೀತಿ ತೀರ್ಮಾನ ಆಗಿದೆ.

"On an occasion the discussion on the Address postponed for sometime in favour of the Government Bill Without a formal motion".

This has been decided long back in the Lok Sabha.

ಆದ್ದರಿಂದ ಇವರು ಹೇಳಿರತಕ್ಕದ್ದು ವಿಧಿ ಬಿಂದು ನಿಲ್ಲುವುದಕ್ಕೆ ಶಕ್ತಿ ಇಲ್ಲ. ನಿಲ್ಲಿಸಿ ಮುಂದಿನ ಕಾರ್ಯಕ್ರಮಗಳಾದ ಮೇಲೆ ತೆಗೆದುಕೊಳ್ಳೋಣ.

Sri. H. Ekanthaiah : This is nothing but anarchy....

(INTERRUPTIONS)

ಗಮನ ಸೆಳೆಯುವ ಸೂಚನೆಗಳು

ಆಶ್ರಯ ಯೋಜನೆಯ ಮನೆಗಳ ರಿಜಿಸ್ಟ್ರೇಷನ್ ಫೀಯನ್ನು ರದ್ದು ಮಾಡುವ ಬಗ್ಗೆ

ಶ್ರೀಮತಿ ಮೋಟಮ್ಮ (ಮೂಡಿಗೆರೆ) ಮಾನ್ಯ ಅಧ್ಯಕ್ಷರೇ, ಆಶ್ರಯ ಯೋಜನೆಯ ಮನೆಗಳ ರಿಜಿಸ್ಟ್ರೇಷನ್ ಫೀ ಅನ್ನು ರದ್ದು ಮಾಡಿಸುವ ಬಗ್ಗೆ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

+ಶ್ರೀ ಧರ್ಮಸಿಂಗ್ (ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ,

ಆಶ್ರಯ ಯೋಜನೆಯಲ್ಲಿ ಮನೆಗಳನ್ನು ಸರ್ಕಾರವೇ ಕಟ್ಟಿಸಿ, ಪುನರ್ವಸತಿ ಕಲ್ಪಿಸುವ ಯೋಜನೆಯನ್ನು ಹಮ್ಮಿಕೊಂಡಿರುವುದರಿಂದ ಮತ್ತು ಫಲಾನುಭವಿಗಳ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ಪರಿಗಣಿಸಿ, ಹಾಗೂ ಸರ್ಕಾರಕ್ಕೆ ಇದರಿಂದ ಆಗುವ ನಷ್ಟವನ್ನು ಪರಿಗಣಿಸಿ, ಆಶ್ರಯ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ಸಂಬಂಧಿಸಿದಂತೆ ಮನೆಗಳ ದಸ್ತಾವೇಜುಗಳ ನೋಂದಣಿಗೆ ತಗಲುವ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಫೀಯನ್ನು ಶೇಕಡ 50 ರಷ್ಟು ಮಾತ್ರ ಮನ್ನಾ ಮಾಡಲು ದಿನಾಂಕ 6.1.1994ರ ಆದೇಶ : ಅಧಿಸೂಚನೆ ನಂ. ಆರ್ಡಿ 162 ಇಎಸ್‌ಎಂ 93 ರಲ್ಲಿ ಸರ್ಕಾರ ಈಗಾಗಲೇ ಆದೇಶ ಹೊರಡಿಸಿದೆ.

ಆಶ್ರಯ ಯೋಜನೆಯಡಿಯಲ್ಲಿ ಸರ್ಕಾರದ ವತಿಯಿಂದ ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದ ಫಲಾನುಭವಿಗಳಿಗೆ ಹಂಚಿಕೆ ಮಾಡಲಾದ ಮನೆಗಳನ್ನು ನೋಂದಾಯಿಸಲು ಫಲಾನುಭವಿಗಳಿಗೆ ತೊಂದರೆಯಾಗುತ್ತಿದೆ. ಈ ದಿನದ ದಿನಾಂಕ 8.2.1994 ರ ಸಚಿವ ಸಂಪುಟದಲ್ಲಿ ತಾತ್ವಿಕ ತೀರ್ಮಾನ ಕೈಗೊಳ್ಳಲಾಗಿದೆ. ಏನೆಂದರೆ, ಆಶ್ರಯ ಯೋಜನೆಯಡಿಯಲ್ಲಿ ನಗರ ಪ್ರದೇಶಗಳಲ್ಲಿ ಕಟ್ಟಲಾಗುವ ಇ.ಡಬ್ಲ್ಯೂ.ಎಸ್.ಮನೆಗಳನ್ನು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಫಲಾನುಭವಿಗಳಿಗಾಗಿ ಕಟ್ಟಲಾಗುವ ಇ.ಡಬ್ಲ್ಯೂ.ಎಸ್. ಮನೆಗಳನ್ನು ಮತ್ತು ಅಂಬೇಡ್ಕರ್ ಶತಮಾನೋತ್ಸವ ಯೋಜನೆಯಡಿಯಲ್ಲಿ ನಗರ ಪ್ರದೇಶಗಳಲ್ಲಿ ಕಟ್ಟಲಾಗಿರುವ ಮನೆಗಳಿಗೆ ಕ್ರಮಾನುಸಾರ ಸಾಲದ ಮೊತ್ತ 10 ಸಾವಿರ ರೂಪಾಯಿಗಳು ಇವೆ. ಅಲ್ಲದೆ ಬೆಂಗಳೂರು ಮಹಾನಗರ ಪ್ರದೇಶದಲ್ಲಿ ಕೊಳಚೆ